**ಅಸಲು ದಾವಾ ನಂ. 494/2022** **ಪಿ ಡಬ್ಲ್ಯೂ :1**

**(ಇಂದು ದಿನಾಂಕಃ 10-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- 1 ಮತ್ತು 2ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಸಿ ಎಂ ಸಿ ರವರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಗನಯ್ಯ ನವರಿಗೆ ಐದು ಜನ ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣು ಮಕ್ಕಳು. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ವಂಶವೃಕ್ಷದಲ್ಲಿ ಸಗನಯ್ಯನ ಹೆಣ್ಣು ಮಕ್ಕಳಾದ ಸಿದ್ದಮ್ಮ, ಮಾಲಿನಿ ಮತ್ತು ಚಂದ್ರಮ್ಮನವರ ಹೆಸರನ್ನು ನಮೂದು ಮಾಡಿರುವುದಿಲ್ಲ. ಅವರಿಗೆ ಕುಟುಂಬ ಆಸ್ತಿಯಲ್ಲಿ ಹಿಸ್ಸೆ ತೆಗೆದುಕೊಂಡು ಹೋಗಿರುವುದಿಲ್ಲ, ಸಾಕ್ಷಿ ಮುಂದುವರೆದು ಅವರು ಬೇಡ ಎಂದು ಹೇಳಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನು ಸದರಿ ವಿಷಯವನ್ನು ನನ್ನ ದಾವಾ ಪತ್ರದಲ್ಲಿ ಹೇಳಿರುವುದಿಲ್ಲ.

ಸಗನಯ್ಯನವರಿಗೆ ಸೇರಿದ ವಾಸದ ಮನೆಗಳು ಡನಾಯಕನಹಳ್ಳಿ ಗ್ರಾಮದಲ್ಲಿ ಇತ್ತು. ಜಮೀನುಗಳು ಇರಲಿಲ್ಲ ,ಹಿತ್ತಲು ಇತ್ತು. ಮನೆ ಮತ್ತು ಹಿತ್ತಲು ಮುಳುಗಡೆಯಾಗಿದ್ದು, ಅದಕ್ಕೆ ಪರಿಹಾರವನ್ನು ಗಂಡು ಮಕ್ಕಳು ಐದು ಜನ ತೆಗೆದುಕೊಂಡಿರುತ್ತಾರೆ. ಐದು ಜನರು ಎಷ್ಟು ಎಷ್ಟು ಹಣ ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹತ್ತು ಹತ್ತು ಸಾವಿರ ಎಂದು ಉತ್ತರಿಸುತ್ತಾರೆ.

ಡನಾಯಕನಹಳ್ಳಿ ಗ್ರಾಮದ ಸ ನಂ.1/1 ಆಸ್ತಿ ನಮ್ಮ ಕುಟುಂಬಕ್ಕೆ ಸೇರಿದ್ದ ಆಸ್ತಿ ಎಂದರೆ ಅಷ್ಟು ನನಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಮಾಲಿನಿ ಕೋಂ ರಂಗಯ್ಯ ನನ್ನ ಅಕ್ಕ. ಸ

ನಂ.1/1 ರಲ್ಲಿ 20 ಗುಂಟೆ ಆಸ್ತಿ ನನ್ನ ಅಕ್ಕನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ಸದರಿ ಆಸ್ತಿಯ ಆರ್ ಟಿ ಸಿ ಯನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಿದ್ದಮ್ಮ ಕೋಂ ಗಂಗಯ್ಯ ನನ್ನ ಅಕ್ಕ. ಪುಟ್ಟಸ್ವಾಮಿ ಬಿನ್ ಲೇಟ್ ಸನಗಯ್ಯ ನನ್ನ ಅಣ್ಣ. ಚಂದ್ರಮ್ಮ ಕೋಂ ಕೃಷ್ಣ ಮೂರ್ತಿ ನನ್ನ ಅಕ್ಕ. ಶಿವಲಿಂಗಯ್ಯ ಎಂದರೆ ನಾನೇ, ಶಾಂತಪ್ಪ ನನ್ನ ತಮ್ಮ, ಗಂಗಮ್ಮ ಕೋಂ ನಂಜಪ್ಪ ನನ್ನ ಅತ್ತಿಗೆ, ಗಿರಜಮ್ಮ ಕೋಂ ಮಲ್ಲೇಶ ನನ್ನ ಅತ್ತಿಗೆ. ಸರ್ವೆ ನಂಃ 1/1 ಮೇಲೆ ಹೇಳಿದ ಎಲ್ಲರ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಆಸ್ತಿ ಈಗ ಒಂದು ವರ್ಷದ ಮುಂದೆ ನಾವು ಮಾರಾಟ ಮಾಡಿರುತ್ತೇವೆ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿದ್ದೀನಾ ಎಂದರೆ ನನಗೆ ನೆನಪಿಲ್ಲ. ಸದರಿ ಆಸ್ತಿಯನ್ನು 5 ರಿಂದ 7 ಲಕ್ಷ ರೂ ಗಳಿಗೆ ಮಾರಾಟ ಮಾಡಿರಬಹುದು.

ಮನೆ ಮುಳುಗಡೆಯಾಗಿ ಬಂದ ಪರಿಹಾರದಿಂದ 1ನೇ ವಾದಿ ಪುಟ್ಟಸ್ವಾಮಿ ಚಿಕ್ಕಮಗಳೂರಿನ ಶಂಕರಪುರದಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮನೆ 2004 ರಲ್ಲಿ ಕಟ್ಟಿರುತ್ತಾರೆ. ಮನೆ ಕಟ್ಟುವ ಪೂರ್ವದಲ್ಲಿಯೇ ಮನೆ ಮುಳುಗಡೆಯಾಗಿ ಪರಿಹಾರ ಪಡೆದಿರುತ್ತೇವೆ ಎಂದರೆ ಸರಿ.

ನಾನು ಹಾಸನದಲ್ಲಿ ವಾಸವಾಗಿರುವ ಮನೆ ಸರ್ಕಾರದಿಂದ ಕಟ್ಟಿಸಿದ ಮನೆ ನನ್ನ ಹೆಂಡತಿ ಹೆಸರಿನಲ್ಲಿ ಮಂಜೂರು ಮಾಡಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತ ದಾಖಲೆ ಇರುತ್ತದೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಾನು ಹಾಸನದಲ್ಲಿ ಕಟ್ಟಿರುವ ಮನೆಯನ್ನು ನಮ್ಮ ಮನೆ ಮತ್ತು ಹಿತ್ತಲು ಮುಳುಗಡೆಯಾದಾಗ ಬಂದ ಪರಿಹಾರದಿಂದ ಕಟ್ಟಿರುತ್ತೇವೆ ಎಂದರೆ

ಸರಿಯಲ್ಲ. ದಾವೆಯಲ್ಲಿ ನಮ್ಮ ಕುಟುಂಬಕ್ಕೆ ಒಟ್ಟು ಎಷ್ಟು ಆಸ್ತಿ ಇತ್ತು ಅದರಲ್ಲಿ ಎಷ್ಟು ಮುಳುಗಡೆಯಾಗಿದೆ ಮತ್ತು ಎಷ್ಟು ಪರಿಹಾರ ಸಿಕ್ಕಿದೆ ಎಂದು ನಮೂದು ಮಾಡಿರುವುದಿಲ್ಲ. ದಾವಾ ಆಸ್ತಿ ಸ ನಂ.80/ಪಿ25 ನನ್ನ ತಂದೆಗೆ ಮಂಜೂರಾಗಿರುತ್ತದೆ. ಮಂಜೂರಾದ ಬಗ್ಗೆ ಮಂಜೂರಾತಿ ಪತ್ರ ಇರುತ್ತದೆ. ಸಾಕ್ಷಿಯು ಮುಂದುವರೆದು ನಮ್ಮ ಕುಟುಂಬದ ಆಸ್ತಿ ಸ. ನಂ.109 ಮುಳುಗಡೆಯಾಗಿದ್ದು ಅದರ ಬದಲು ದಾವಾ ಆಸ್ತಿಯನ್ನು ಮಂಜೂರು ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ತಂದೆಗೆ ದಾವಾ ಆಸ್ತಿ ಮಂಜೂರಾದ ಬಗ್ಗೆ ಮಂಜೂರಾತಿ ಪತ್ರವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ.

ಮಲ್ಲೇಶ ಬಿನ್ ಸಗನಯ್ಯ ಎಂದರೆ 1ನೇ ಪ್ರತಿವಾದಿಯ ಗಂಡ ಮತ್ತು 2ನೇ ಪ್ರತಿವಾದಿಯ ತಂದೆ. ನಿಪಿ-8 ರ ಪ್ರಕಾರ ಆಸ್ತಿ ಮಲ್ಲೇಶ್ ಬಿನ್ ಸಗನಯ್ಯನವರ ಹೆಸರಿಗೆ ಮಂಜೂರಾಗಿದೆ ಎಂದರೆ ಸರಿ. ನಿಪಿ-8 ರಲ್ಲಿ ಒಟ್ಟು ಕುಟುಂಬದ ಪರವಾಗಿ ಮಲ್ಲೇಶ್ ರವರಿಗೆ ಮಂಜೂರಾಗಿದೆ ಎಂದು ಬರೆದಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ಆಸ್ತಿ ಮುಳುಗಡೆಯಾಗಿ ಪರಿಹಾರ ಪಡೆಯುವಾಗ ಪ್ರತ್ಯೇಕವಾಗಿ ಪುನಃ ಆಸ್ತಿಯನ್ನು ಮಂಜೂರು ಮಾಡಿಸಲು ಪತ್ರ ನೀಡುತ್ತಾರೆ ಎಂದರೆ ಸರಿ. ನಮಗೆ ಆ ರೀತಿ ಪತ್ರ ನೀಡಿರುವುದಿಲ್ಲ. ನಾವು ನಮ್ಮ ಆಸ್ತಿ ಮುಳುಗಡೆಯಾಗಿದೆ ನಮಗೂ ಕೂಡ ಆಸ್ತಿ ಮಂಜೂರು ಮಾಡಿಕೊಡಿ ಎಂದು ಅರ್ಜಿ ಕೊಟ್ಟಿದ್ದೆವು ಆದರೆ ಒಂದೇ ಆಸ್ತಿ ಮಂಜೂರು ಆಗುತ್ತದೆ ಎಂದು ಹೇಳಿರುತ್ತಾರೆ . ಆ ರೀತಿ ಅರ್ಜಿ ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ನಾನು ಈ ದಾವೆಯಲ್ಲಿ ಎಲ್ಲರಿಗೂ ಆಸ್ತಿ ಮಂಜೂರು ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದೆವು, ಆದರೆ ಒಂದೇ ಆಸ್ತಿ

ಮಂಜೂರು ಮಾಡುತ್ತಾರೆ ಎಂದು ಹೇಳಿದ್ದು, ಮಲ್ಲೇಶ್ ರವರ ಹೆಸರಿಗೆ ಮಂಜೂರು ಮಾಡಿರುತ್ತಾರೆ ಎಂದು ನನ್ನ ವಾದಪತ್ರದಲ್ಲಿ ಬರೆದಿರುವುದಿಲ್ಲ. ನಾವೆಲ್ಲರೂ ಪ್ರತ್ಯೇಕವಾಗಿ ಮನೆ ಮತ್ತು ಹಿತ್ತಲು ಮುಳುಗಡೆಯಾದಾಗ ಪರಿಹಾರ ತೆಗೆದುಕೊಂಡೆವು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮನೆಯಲ್ಲಿ ಹಿರಿಯ ಮಗನಾದ ಮಲ್ಲೇಶ್ ರವರಿಗೆ ಪರಿಹಾರ ಬಂದಿತ್ತು, ಅವರು ನಮಗೆ ಹಂಚಿ ಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ.

ಸಗನಯ್ಯನವರ ಹಿರಿಯ ಮಗ ನಂಜಪ್ಪ. ಅವರು ತೀರಿಕೊಂಡು ಈಗ ಸುಮಾರು 10 ವರ್ಷ ಆಗಿರಬಹುದು. ಅವರ ಮರಣ ಪ್ರಮಾಣಪತ್ರ ಇರುತ್ತದೆ , ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಸ ನಂ.109 ಆಸ್ತಿ ಮುಳುಗಡೆಯಾದಾಗ ಖಾತೆ ನನ್ನ ತಂದೆ ಹೆಸರಿನಲ್ಲಿ ಇತ್ತು ಮತ್ತು ಅವರು ಆಗ ಜೀವಂತವಾಗಿದ್ದರು. ನನ್ನ ತಂದೆಯ ಮರಣ ಪ್ರಮಾಣಪತ್ರ ಇರುತ್ತದೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ಸ ನಂ.109 ಆಸ್ತಿ ಮುಳುಗಡೆಯಾದಾಗ ಅದರ ಪರಿಹಾರ ಯಾರ ಹೆಸರಿಗೆ ಬಂದಿತ್ತು ಎಂದರೆ ನನಗೆ ನೆನಪಿಲ್ಲ. ಪರಿಹಾರವನ್ನು 1997 ರಲ್ಲಿ ಪಡೆದಿರಬಹುದು. 1997 ರಲ್ಲಿ ನನ್ನ ತಂದೆ ಜೀವಂತ ಇರಲಿಲ್ಲ. ನನ್ನ ತಾಯಿ ಜಾನಕಮ್ಮ 2009 ರಲ್ಲಿ ತೀರಿಕೊಂಡಿರುತ್ತಾರೆ. ಸ ನಂ.109 ಆಸ್ತಿ ಮೂಲತಃ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ, ಅದು ನನ್ನ ತಂದೆ ಹೆಸರಿನಲ್ಲಿ ಇತ್ತು. ಸದರಿ ಆಸ್ತಿ ನನ್ನ ತಂದೆಗೆ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿ ಯಾವ ರೀತಿ ನನ್ನ ತಂದೆಗೆ ಬಂತು ಎಂದು ನಾನು ತಿಳಿದುಕೊಂಡಿರುವುದಿಲ್ಲ.

ಎಷ್ಟು ವರ್ಷಗಳಿಂದ ದಾವಾ ಅಸ್ತಿ ಪ್ರತಿವಾದಿಗಳ ಸ್ವಾಧೀನದಲ್ಲಿ ಇದೆ ಎಂದರೆ ಸಾಕ್ಷಿಯು ಖಾತೆ ಅವರ ಹೆಸರಿನಲ್ಲಿ ಇದೆ, ನಾವು ಒಟ್ಟಿಗೆ ಸ್ವಾಧೀನದಲ್ಲಿ ಇದ್ದೇವೆ ಎಂದು ಉತ್ತರಿಸುತ್ತಾರೆ . ಮಂಜೂರಾತಿ ಆಧಾರದ ಮೇಲೆ ಪ್ರತಿವಾದಿಗಳ ಹೆಸರಿಗೆ ಖಾತೆಯಾಗಿದ್ದು ಅದನ್ನು ನಾನು ಪ್ರಶ್ನಿಸಿರುವುದಿಲ್ಲ. ಮಲ್ಲೇಶ್ ನವರ ಹೆಸರಿನಲ್ಲಿ ಇರುವ ದಾವಾ ಆಸ್ತಿಯ ದಾಖಲೆಗಳನ್ನು ನಾನು 1998 ರಿಂದ ನೋಡಿರುತ್ತೇನೆ. ಸದರಿ ಆಸ್ತಿಗೆ ಪ್ರತಿವಾದಿಗಳು ಲೋನ್ ತೆಗೆದುಕೊಂಡಿರುತ್ತಾರೆ. ಅವರು ಎಷ್ಟು ಸಲ ಲೋನ್ ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಮಲ್ಲೇಶ್ ರವರು ತೆಗೆದುಕೊಂಡ ಲೋನ್ ಅನ್ನು ಅವರೇ ತೀರಿಸಿರುತ್ತಾರೆ ಎಂದರೆ ಸಾಕ್ಷಿಯು ಸರ್ಕಾರದಿಂದ ವಜಾ ಆಗುತ್ತಿತ್ತು ಎಂದು ಉತ್ತರಿಸುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲೆಗಳು ಇರುವುದಿಲ್ಲ .

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**